ಕರ್ನಾಟಕ ಸರ್ಕಾರ

ತಾಂತ್ರಿಕ ಶಿಕ್ಷಣ ಇಲಾಖೆ

**File No: DTE-ADMI0ACM2/126/2021**

ಆಯುಕ್ತರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಅರಮನೆ ರಸ್ತೆ, ಬೆಂಗಳೂರು - 560 001.
ದಿನಾಂಕ:04-01-2022.

## ಸು ತ್ತೋ ಲೆ

**ವಿಷಯ:** 2021-22ನೇ ಶೈಕ್ಷಣಿಕ ಸಾಲಿನ ಡಿಪ್ಲೋಮಾ ಸಮ ಮತ್ತು ಬೆಸ ಸೆಮಿಸ್ಟರ್ ತರಗತಿಗಳ ಪರಿಷ್ಕೃತ ತಾತ್ಕಾಲಿಕ ಶೈಕ್ಷಣಿಕ ವೇಳಾಪಟ್ಟಿ ಕುರಿತು.

**ಉಲ್ಲೇಖ:-**
1. ಈ ಕಛೇರಿ ಸಮಸಂಖ್ಯೆ ಸುತ್ತೋಲೆ ಪತ್ರ ದಿ:29-10-2021.
2. ಕಾರ್ಯದರ್ಶಿಯವರು, ತಾಂತ್ರಿಕ ಪರೀಕ್ಷಾ ಮಂಡಳಿ ಇವರ ಅಧಿಕೃತ ಜ್ಞಾಪನ ಪತ್ರ ಸಂ. ಬಿಟಿಇ 10 ಇಪಿಎಸ್ 2021, ದಿ:27-12-2021.

********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ರಾಜ್ಯದ ಎಲ್ಲಾ ಡಿಪ್ಲೋಮಾ ಕಾಲೇಜುಗಳಲ್ಲಿ ಸರ್ಕಾರದ ಆದೇಶ ಸಂ. ಇಡಿ 197 ಯುಎನ್ಇ 2020, ದಿ:23-07-2021 ರನ್ವಯ ಅನುಸರಿಸಬೇಕಾದ ಪ್ರಮಾಣಿತ ಕಾರ್ಯಚರಣಾ ವಿಧಾನದ ಮಾರ್ಗಸೂಚಿಗಳನ್ನು ಅಳವಡಿಸಿಕೊಂಡು ಉಲ್ಲೇಖ(1)ರ ಈ ಕಛೇರಿ ಸುತ್ತೋಲೆಯಲ್ಲಿ ಡಿಪ್ಲೋಮಾ ತರಗತಿಗಳ ತಾತ್ಕಾಲಿಕ ಶೈಕ್ಷಣಿಕ ವೇಳಾಪಟ್ಟಿಯನ್ನು ನಿಗಧಿಪಡಿಸಲಾಗಿತ್ತು. ಆದರೆ, ತಾಂತ್ರಿಕ ಪರೀಕ್ಷಾ ಮಂಡಳಿಯ ಕಾರ್ಯದರ್ಶಿಯವರ ಶಿಫಾರಸ್ಸಿನಂತೆ ಉಲ್ಲೇಖ(1)ರಲ್ಲಿ ನಿಗಧಿಪಡಿಸಿರುವ ತಾತ್ಕಾಲಿಕ ಶೈಕ್ಷಣಿಕ ವೇಳಾಪಟ್ಟಿಯನ್ನು ಭಾಗಶಃ ಮಾರ್ಪಡಿಸಿ 2021-22ನೇ ಶೈಕ್ಷಣಿಕ ಸಾಲಿನ ಪರಿಷ್ಕೃತ ತಾತ್ಕಾಲಿಕ ಶೈಕ್ಷಣಿಕ ವೇಳಾಪಟ್ಟಿಯನ್ನು ಈ ಕೆಳಕಂಡಂತೆ ನಿಗಧಿಪಡಿಸಿದೆ.

### ಹಗಲು ಪಾಲಿಟೆಕ್ನಿಕ್‌ಗಳು

| ಕ್ರ.ಸ. | ಶೈಕ್ಷಣಿಕ ಕಾರ್ಯಕ್ರಮ | ಅವಧಿ ದಿನಾಂಕ | |
|---|---|---|---|
| | | ಪ್ರಾರಂಭ | ಮುಕ್ತಾಯ |
| 01. | 01 ನೇ ಸೆಮಿಸ್ಟರ್ ತರಗತಿಗಳು | 01-10-2021 | 14-03-2022 |
| | 03 & 05ನೇ ಸೆಮಿಸ್ಟರ್ ತರಗತಿಗಳು | 29-11-2021 | |
| | 01, 03 & 05ನೇ ಸೆಮಿಸ್ಟರ್ ಪ್ರಾಯೋಗಿಕ ಪರೀಕ್ಷೆಗಳು | 17-03-2022 | 25-03-2022 |
| | 01, 03 & 05ನೇ ಸೆಮಿಸ್ಟರ್ ಥಿಯರಿ ಪರೀಕ್ಷೆಗಳು | 28-03-2022 | 20-04-2022 |
| 02. | 02, 04 & 06ನೇ ಸೆಮಿಸ್ಟರ್ ತರಗತಿಗಳು | 27-04-2022 | 17-08-2022 |
| | ಪ್ರಾಯೋಗಿಕ ಪರೀಕ್ಷೆಗಳು | 22-08-2022 | 29-08-2022 |
| | ಥಿಯರಿ ಪರೀಕ್ಷೆಗಳು | 01-09 -2022 | 22-09-2022 |

(*2021-22ನೇ ಸಾಲಿನ ತಾತ್ಕಾಲಿಕ ಶೈಕ್ಷಣಿಕ ವೇಳಾಪಟ್ಟಿಯು, ತುರ್ತು ಅಗತ್ಯ ನೈಸರ್ಗಿಕ ಪರಿಸ್ಥಿತಿಗೆ ಅನುಗುಣವಾಗಿ, ಅಲ್ಪಬದಲಾವಣೆಗೆ ಒಳಪಟ್ಟಿರುತ್ತ.)

01ನೇ ಸೆಮಿಸ್ಟರ್‌ಗೆ ಪ್ರವೇಶ ಪಡೆದ ವಿದ್ಯಾರ್ಥಿಗಳು ಸಿ-20 ಪಠ್ಯಕ್ರಮದಡಿ ಅಭ್ಯಸಿಸಬೇಕಾಗಿರುವುದರಿಂದ ಸದರಿ ವಿದ್ಯಾರ್ಥಿಗಳಿಗೆ ಕಲಿಕಾ ಮಟ್ಟವನ್ನು ಉತ್ತಮಪಡಿಸಲು ಹಾಗೂ ಪಾಠ ಪ್ರವಚನಗಳನ್ನು ಪುನರ್‌ಮನನ ಮಾಡಿಕೊಳ್ಳುವ ಸಲುವಾಗಿ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಅವಧಿಯನ್ನು ವಿಸ್ತರಿಸಲಾಗಿದೆ. ರಾಜ್ಯದ ಎಲ್ಲಾ ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರುಗಳು ಗಮನದಲ್ಲಿರಿಸಿಕೊಂಡು ಕೋವಿಡ್-19 ಸಾಂಕ್ರಾಮಿಕ ರೋಗದ ಹಿನ್ನಲೆಯಲ್ಲಿ ಮುನ್ನಚರಿಕೆ ಕ್ರಮಗಳನ್ನು ಅನುಸರಿಸಿ, ನಿಯಮಗಳ ಪ್ರಕಾರ ಪಾಠ ಪ್ರವಚನಗಳನ್ನು ಮುಕ್ತಾಯಗೊಳಿಸುವಲ್ಲಿ ಕ್ರಮ ತೆಗೆದುಕೊಳ್ಳಬೇಕೆಂದು ತಿಳಿಸಲಾಗಿದೆ.

ಆಯುಕ್ತರು
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ
ಬೆಂಗಳೂರು

ಇವರಿಗೆ,

*ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ ಮತ್ತು ಖಾಸಗಿ ಪಾಲಿಟೆಕ್ನಿಕ್‌ಗಳ ಪ್ರಾಂಶುಪಾಲರುಗಳಿಗೆ – ಸೂಕ್ತ ಕ್ರಮಕ್ಕಾಗಿ ಹಾಗೂ ಅನುಸರಣೆಗಾಗಿ*

ಪ್ರತಿ:-

1. ಮಾನ್ಯ ಆಯುಕ್ತರ ಆಪ್ತಶಾಖೆಗೆ.
2. ಮಾನ್ಯ ನಿರ್ದೇಶಕರ ಆಪ್ತಶಾಖೆಗೆ.
3. ಜಂಟಿ ನಿರ್ದೇಶಕರು(ಆಡಳಿತ), ಕಾಲೇಜು & ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
4. ಜಂಟಿ ನಿರ್ದೇಶಕರು(ಪರೀಕ್ಷೆ), ಕಾಲೇಜು & ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
5. ಆಡಳಿತಾಧಿಕಾರಿಗಳು, ಕಾಲೇಜು & ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು
6. ಸಾರ್ವಜನಿಕ ಸಂಪರ್ಕಾಧಿಕಾರಿಗಳು, ಕಾಲೇಜು & ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
7. ಇ-ಆಡಳಿತ ವಿಭಾಗಕ್ಕೆ – ಸದರಿ ಸುತ್ತೋಲೆಯನ್ನು ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಚುರಪಡಿಸುವುದು.
8. ರಿಜಿಸ್ಟ್ರಾರ್(ಪರೀಕ್ಷೆ), ಕಾಲೇಜು & ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
9. ಕಛೇರಿ ಪ್ರತಿ.